| | |
|---|---|
| ಪ್ರಾಸಾ | 01 |
| ಚಾಸಾ | 01 |

ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 26/2025

ಸಾಕ್ಷಿಗೆ ತೆಲುಗು ಮಾತ್ರ ಬರುತ್ತಿದ್ದರಿಂದ ವಕೀಲರಾದ ಶ್ರೀ. ಬಿ.ಕೆ. ಆನಂದ್ ರೋಲ್ ನಂ: **KAR- 1673/2012** ರವರನ್ನು ಸಾಕ್ಷಿ ವಿಚಾರಣೆಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಲು ನೇಮಿಸಿಕೊಂಡಿರುತ್ತದೆ. ಸದರಿ ವಕೀಲರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಗೆ ತರ್ಜುಮೆದಾರರ ಮುಖಾಂತರ ತೆಲುಗು ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರೋಜ |
| ಗಂಡನ ಹೆಸರು | : | ನಾಗರಾಜು |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಹಣ್ಣಿನ ವ್ಯಾಪಾರ |
| ವಾಸಸ್ಥಳ | : | ಲೇಪಾಕ್ಷಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಚಾಸಾ-2-ದಿನೇಶ್ ನನ್ನ ತಮ್ಮ, ಚಾಸಾ-3- ನನ್ನ ತಾಯಿ, ಚಾಸಾ-4-ಸಿಂದು ನನ್ನ ತಂಗಿ, ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು.

2. ನನಗೆ ಮತ್ತು ನನ್ನ ಗಂಡನಾದ ನಾಗರಾಜು ರವರಿಗೆ ಗಲಾಟೆಯಾಗಿರುತ್ತದೆ.

| | |
|---|---|
| ಪ್ರಾಸಾ | 01 |
| ಚಾಸಾ | 01 |

ಗಲಾಟೆಯಾದ ನಂತರ ಆರೋಪಿ ಆರು ತಿಂಗಳ ನಂತರ ಎಲ್ಲೋ ಹೋಗಿದ್ದರು. ಪುನಃ ಆರು ತಿಂಗಳ ನಂತರ ಆರೋಪಿ ಮಾಸ್ಕ್ ಹಾಕಿಕೊಂಡು ನನ್ನ ಅಂಗಡಿಯ ಬಳಿ ಬಂದು ಚಾಕುವಿನಿಂದ ನನ್ನ ಹೊಟ್ಟೆಗೆ ತಿವಿಯಲು ಬಂದಾಗ ಹಣ್ಣಿನ ಟ್ರೆ ಅಡ್ಡ ಇಟ್ಟಿದ್ದರಿಂದ ತೊಡೆಗೆ ಮತ್ತು ನನ್ನ ಎಡಕೈ, ಮೊಣಕೈಗೆ ಮತ್ತು ಎಡಕಾಲಿನ ತೊಡೆಗೆ ಮೂರು ಬಾರಿ ತಿವಿದಿರುತ್ತಾರೆ. ನನ್ನ ತಮ್ಮನ ಎಡಭಾಗದ ಪಕ್ಕೆಲುಬಿಗೆ ಚಾಕುವಿನಿಂದ ತಿವಿದಿರುತ್ತಾರೆ. ನನ್ನ ತಾಯಿಗೆ ಆರೋಪಿ ಚಾಕುವಿನಿಂದ ಕುತ್ತಿಗೆಯ ಬಲಭಾಗಕ್ಕೆ ದವಡೆಯ ಕೆಳಭಾಗದಲ್ಲಿ ಮತ್ತು ಹೊಟ್ಟೆಯ ಭಾಗಕ್ಕೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿಗೆ ನಾನು ಬೇಡ ಎಂದು ಮತ್ತು ಆತನು ತನ್ನ ಮೊದಲನೇ ಹೆಂಡತಿಯೊಂದಿಗೆ ಚೆನ್ನಾಗಿರಲು ನಾನು ಆತನಿಗೆ ಅಡ್ಡ ಎಂದು ನಮ್ಮ ಮೇಲೆ ಆರೋಪಿ ಹಲ್ಲೆ ಮಾಡಿರುತ್ತಾರೆ.

3. ಆದಾದ ನಂತರ ಆರೋಪಿ ಹಲ್ಲೆ ಮಾಡಿದ್ದರಿಂದ ನಾವು ಬಾಗೇಪಲ್ಲಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ನಮ್ಮ ಗಾಯಗಳಿಗೆ ಹೊಲಿಗೆ ಹಾಕಿ ಕಳುಹಿಸಿದರು. ಹೆಚ್ಚಿನ ಚಿಕಿತ್ಸೆಯನ್ನು ನಾವು ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಪಡೆದಿರುತ್ತೇವೆ. ಚಿಕ್ಕಬಳ್ಳಾಪುರ ಆಸ್ಪತ್ರೆಯಲ್ಲಿ ಅಪರೇಷನ್ ಮಾಡಬೇಕು, ಇಲ್ಲಿ ಆಗುವುದಿಲ್ಲ ಎಂದು ಹೇಳಿದ ಮೇರೆಗೆ ನಾವು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ

| | |
|---|---|
| ಪ್ರಾಸಾ | 01 |
| ಚಾಸಾ | 01 |

ಪಡೆದಿರುತ್ತೇವೆ. ಸದರಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನ್ನ ತಮ್ಮ ಮತ್ತು ತಾಯಿಗೆ ಅಪರೇಷನ್ ಮಾಡಿರುತ್ತಾರೆ. ನನಗೆ ಅಲ್ಲಿ ಡ್ರಸಿಂಗ್ ಮಾಡಿ ಹೊಲಿಗೆ ಹಾಕಿ ಕಳುಹಿಸಿರುತ್ತಾರೆ. ನನ್ನ ತಾಯಿ 25 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು. ನನ್ನ ತಮ್ಮ 10 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು.

4. ಆರೋಪಿ ನಮ್ಮ ಮೇಲೆ ಹಲ್ಲೆ ಮಾಡಿದ್ದು ದಿಃ 08.01.2025 ರಂದು ಸಂಜೆ 6.30 ಗಂಟೆಗೆ ಹಲ್ಲೆ ಮಾಡಿರುತ್ತಾರೆ. ಆ ಬಗ್ಗೆ ಪೊಲೀಸರಿಗೆ ದೂರನ್ನು ಬೆಂಗಳೂರಿನ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದಿಃ 09.01.2025 ರ ಗಾಯಾಳುವಿನ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆರೋಪಿ ಯಾವಾಗಲು ಫೋನ್ ನಲ್ಲಿ ಮಾತನಾಡಿಕೊಂಡು ಬೇರೆ ಬೇರೆ ಹೆಂಗಸರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಅದನ್ನು ನಾನು ಪ್ರಶ್ನಿಸಿದಾಗ ಮತ್ತು ಮದುವೆಗಿಂತ ಮೊದಲು ನೀನು ಏನು ಮಾಡಿದೇಯೊ, ಹೇಗಿದ್ದೆಯೋ ನನಗೆ ಬೇಡ, ನನ್ನೊಂದಿಗೆ ಮದುವೆಯಾದ ನಂತರ ಚೆನ್ನಾಗಿರು ಎಂದು ಹೇಳಿದ್ದಕ್ಕೆ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದರು. ಆರೋಪಿ ಕೃತ್ಯದ ಸಮಯ ಉಪಯೋಗಿಸಿದ್ದ ಚಾಕುವನ್ನು

| | |
|---|---|
| ಪ್ರಾಸಾ | 01 |
| ಚಾಸಾ | 01 |

ನೋಡಿದರೆ ಗುರುತಿಸುತ್ತೇನೆ.

5. ನ್ಯಾಯಾಲಯದ ಅನುಮತಿ ಮೇರೆಗೆ ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ತನಿಖಾಧಿಕಾರಿ K ಎಂದು ಗುರುತು ನೀಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಒಂದು ಚಾಕು ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು.

6. ನಂತರ ಪೊಲೀಸರು ಕರೆ ಮಾಡಿದ್ದಕ್ಕೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನೆ. ಬುಧವಾರ ಕೃತ್ಯ ನಡೆದಿರುತ್ತದೆ. ನಂತರ ಸೋಮವಾರ ರಕ್ತದ ಕಲೆಗಳಾಗಿರುವ ಬಟ್ಟೆಗಳನ್ನು ಪಾತಪಾಳ್ಯ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಹಾಜರುಪಡಿಸಿರುತ್ತೇನೆ. ಸದರಿ ಸಮಯ ಪೊಲೀಸರು ಅದನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಸಮಯ ಮಹಜರ್ ನನ್ನ ಸಹಿ ಪಡೆದಿರುತ್ತಾರೆ. ಸದರಿ ಬಟ್ಟೆ ಮತ್ತು ಮಹಜರ್ ನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಮಯದಲ್ಲಿ ಪೊಟೋಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯು ದಿಃ 13.01.2025 ರ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ

| | |
|---|---|
| ಪ್ರಾಸಾ | 01 |
| ಚಾಸಾ | 01 |

2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ನಾನು ಮತ್ತು ಸಾಕ್ಷಿದಾರ-ವೆಂಕಟೇಶ್ ಮತ್ತು ಇನ್ನೊಬ್ಬರು ಹಾಗೂ ಪೊಲೀಸರು ಇದ್ದರು.

7. ನ್ಯಾಯಾಲಯದ ಅನುಮತಿ ಮೇರೆಗೆ ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂ: 1 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ನೀಲಿ ಬಣ್ಣದ ನೈಟ್ ಪ್ಯಾಂಟ್ ಇದ್ದು, ಅದು ನನ್ನ ತಮ್ಮನದ್ದು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು. ಮಾ 2 ಎಂದು ಗುರುತಿಸಲಾಯಿತು.

8. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂ: 2 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಹಳದಿ, ನೀಲಿ ಮತ್ತು ಮೆರೂನ್ ಬಣ್ಣದ ತೂತು ಬಿದ್ದಿರುವ ಒಂದು ವೇಲ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ವೇಲ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 3 ಎಂದು ಗುರುತಿಸಲಾಯಿತು.

| | |
|---|---|
| ಪ್ರಾಸಾ | 01 |
| ಚಾಸಾ | 01 |

9. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂ: 3 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಹಳದಿ ಬಣ್ಣದ ಹರಿದಿರುವ ಒಂದು ಸ್ವೆಟರ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ಸ್ವೆಟರ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 4 ಎಂದು ಗುರುತಿಸಲಾಯಿತು.

10. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂ: 4 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಮೆರೂನ್ ಬಣ್ಣದ ತೂತು ಬಿದ್ದಿರುವ ಹರಿದಿರುವ ಪ್ಯಾಂಟ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ಪ್ಯಾಂಟ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 5 ಎಂದು ಗುರುತಿಸಲಾಯಿತು.

11. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂ: 5 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಹಸಿರು ಮತ್ತು ಬಿಳಿ ಬಣ್ಣದ ಡಿಸೈನ್ ಇರುವ ಒಂದು ಟಾಪ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು,

| | |
|---|---|
| ಪ್ರಾಸಾ | 01 |
| ಚಾಸಾ | 01 |

ಅದು ನನ್ನ ಟಾಪ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 6 ಎಂದು ಗುರುತಿಸಲಾಯಿತು.

12. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂಃ 6 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಪ್ಯಾರೇಟ್ ಗ್ರಿನ್ ಮತ್ತು ಬ್ರೌನ್ ಬಣ್ಣದ ಡಿಸೈನ್ ಹೂವುಗಳಿರುವ ಸೀರೆ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ತಾಯಿಯ ಸೀರೆ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 7 ಎಂದು ಗುರುತಿಸಲಾಯಿತು.

13. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂಃ 7 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಮೆರೂನ್ ಬಣ್ಣದ ಡಿಸೈನ್ ಬ್ಲೌಸ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ತಾಯಿಯ ಬ್ಲೌಸ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 8 ಎಂದು ಗುರುತಿಸಲಾಯಿತು.

| | |
|---|---|
| ಪ್ರಾಸಾ | 01 |
| ಚಾಸಾ | 01 |

14. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂಃ 8 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ತಿಳಿ ಹಸಿರು ಬಣ್ಣದ ಲಂಗ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ತಾಯಿಯ ಲಂಗ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 9 ಎಂದು ಗುರುತಿಸಲಾಯಿತು.

15. ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ಕ್ರಮ ಸಂಃ 9 ಎಂದು ನಮೂದು ಮಾಡಿರುವ ಒಂದು ಪೊಟ್ಟಣವನ್ನು ತೆರೆದು ನೋಡಲಾಗಿ, ಅದರಲ್ಲಿ ರಕ್ತ ಕಲೆಯಾಗಿರುವ ಖಾಕಿ ಬಣ್ಣದ ಸ್ವೆಟರ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನನ್ನ ತಾಯಿಯ ಸ್ವೆಟರ್ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲನ್ನು ಆರೋಪಿ ವಕೀಲರ ಕೋರಿಕೆ ಮೇರೆಗೆ ರೂ. 1000/- ಖರ್ಚಿನ ಬಾಬ್ತು ಮುಂದೂಡಲಾಯಿತು.**

| | |
|---|---|
| ಪ್ರಾಸಾ | 01 |
| ಚಾಸಾ | 01 |

**(ದಿನಾಂಕಃ 21.08.2025 ರಂದು ತೆರೆದ ನ್ಯಾಯಾಲಯದಲ್ಲಿ ತರ್ಜುಮೆದಾರರು ಸಾಕ್ಷಿ ಹೇಳಿದ್ದನ್ನು ತರ್ಜುಮೆ ಮಾಡಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**